# ಗೃಹಸ್ಥ ಧರ್ಮ

ಡಾ. ಹೆಚ್.ವಿ.ನಾಗರಾಜರಾವ್

ನಮ್ಮ ಪರಂಪರೆಯಲ್ಲಿ ಗೃಹಸ್ಥರು ಅನುಸರಿಸಬೇಕಾದ ಧರ್ಮ ಯಾವುದು ಎಂಬುದನ್ನು ಕುರಿತು ಹಲವು ಸ್ಮೃತಿ ಗ್ರಂಥಗಳಲ್ಲಿ ಹೇಳಲಾಗಿದೆ. ಈ ಹಿನ್ನೆಲೆಯಲ್ಲಿ ಜನಸಾಮಾನ್ಯರ ಕರ್ತವ್ಯ , ನಂಬಿಕೆ ಹಾಗೂ ಜೀವನಕ್ರಮವನ್ನು ರೂಪಿಸಲಾಗಿತ್ತು . ಈ ಕುರಿತು ಇಲ್ಲಿ ವಿವರಿಸಿರುವ ಲೇಖಕರು ಹಿರಿಯ ಸಂಸ್ಕೃತ ವಿದ್ವಾಂಸರು. ಅವರು ಮೈಸೂರು ಪ್ರಾಚ್ಯ ಸಂಶೋಧನಾ ಸಂಸ್ಥೆಯ ನಿವೃತ್ತ ಸಂಶೋಧಕರು.

**ವಾಗಾರ್ಥಾವಿವ ಸಂಪೃಕ್ತೌ ವಾಗರ್ಥಪ್ರತಿಪತ್ತಯೇ ।**
**ಜಗತಃ ಪಿತರೌ ವಂದೇ ಪಾರ್ವತಿಪರಮೇಶ್ವರೌ ॥**

**ಭಾ**ರತೀಯ ಸಂಸ್ಕೃತಿಯಲ್ಲಿ ನಾಲ್ಕು ಆಶ್ರಮಗಳನ್ನು ಅಂಗೀಕರಿಸಲಾಗಿದೆ. ಬ್ರಹ್ಮಚರ್ಯ, ಗಾರ್ಹಸ್ಥ್ಯ, ವಾನಪ್ರಸ್ಥ, ಸಂನ್ಯಾಸ ಎಂಬವು ನಾಲ್ಕು ಆಶ್ರಮಗಳು. ಜೀವನದ ಮೊದಲನೆಯ ಅವಧಿಯಲ್ಲಿ ಬ್ರಹ್ಮಚರ್ಯ. ಇದರಲ್ಲಿ ಮನುಷ್ಯನು ವಿದ್ಯಾಭ್ಯಾಸವನ್ನು ಮಾಡಬೇಕು. ಎರಡನೆಯ ಅವಧಿಯಲ್ಲಿ ಗೃಹಸ್ಥಾಶ್ರಮ. ಮದುವೆ ಮಾಡಿಕೊಂಡು ಧರ್ಮಾವಿರುದ್ಧವಾಗಿ ಸುಖ ಸಂತೋಷಗಳನ್ನು ಪಡೆಯುವ ಸಮಯ. ಬದುಕಿನ ಮೂರನೆಯ ಅವಧಿಯಲ್ಲಿ ವಾನಪ್ರಸ್ಥ. ಹಿಂದಿನ ಕಾಲದಲ್ಲಿ ವೃದ್ಧರು ತಮ್ಮ ಕುಟುಂಬದ ಜವಾಬ್ದಾರಿಯನ್ನು ಮಕ್ಕಳಿಗೆ ವಹಿಸಿ ತಾವು ಅಧ್ಯಾತ್ಮ ಚಿಂತನೆಗಾಗಿ ಕಾಡಿಗೆ ಹೋಗುವ ಸಂಪ್ರದಾಯವಿತ್ತು. ಜೀವನದ ಕೊನೆಯ ಅವಧಿಯಲ್ಲಿ ಲೋಕದ ಸಕಲ ವ್ಯವಹಾರಗಳನ್ನು ತ್ಯಜಿಸಿ ಪೂರ್ಣವಾಗಿ ಧ್ಯಾನ-ತಪಸ್ಸು-ಸೇವೆಯಲ್ಲಿ ತೊಡಗುವ ಆಶ್ರಮವನ್ನು ಸಂನ್ಯಾಸ ಎನ್ನುತ್ತಿದ್ದರು. ಇದನ್ನು ಕಾಳಿದಾಸನು ರಘುವಂಶದ ರಾಜರ ವರ್ಣನೆಯಲ್ಲಿ ಹೀಗೆ ತಿಳಿಸುತ್ತಾನೆ :

**ಶೈಶವೇಽಭ್ಯಸ್ತವಿದ್ಯಾನಾಂ ಯೌವನೇ ವಿಷಯೈಷಿಣಾಮ್।**
**ವಾರ್ಧಕೇ ಮುನಿವೃತ್ತೀನಾಂ ಯೋಗೇನಾಂತೇ ತನುತ್ಯಜಾಮ್ ॥**

(ರಘುವಂಶದ ರಾಜರು ಬಾಲ್ಯದಲ್ಲಿ ವಿದ್ಯಾಭ್ಯಾಸವನ್ನು ಮಾಡುತ್ತಿದ್ದರು, ತಾರುಣ್ಯದಲ್ಲಿ ವಿಷಯಸುಖಗಳನ್ನು ಅನುಭವಿಸುತ್ತಿದ್ದರು, ಮುದಿತನದಲ್ಲಿ ಮುನಿಗಳಂತೆ ಜೀವಿಸುತ್ತಿದ್ದರು, ಬದುಕಿನ ಕೊನೆಯಲ್ಲಿ ಯೋಗಮಾರ್ಗದಿಂದ ದೇಹವನ್ನು ತ್ಯಜಿಸುತ್ತಿದ್ದರು.)

ಇತಿಹಾಸ-ಪುರಾಣಗಳಲ್ಲಿ ಗೃಹಸ್ಥಾಶ್ರಮಕ್ಕೇ ಪ್ರಥಮಸ್ಥಾನ. ಜ್ಞಾನಿಗಳಾಗಿದ್ದ ಋಷಿಗಳೆಲ್ಲರೂ ಗೃಹಸ್ಥರಾಗಿದ್ದು ಪತ್ನೀಸಹಿತರಾಗಿ ಸಾಧನೆಯನ್ನು ಮಾಡುತ್ತಿದ್ದರು. ವಸಿಷ್ಠ ಮಹರ್ಷಿಗಳ ಪತ್ನಿ ಅರುಂಧತೀ, ಅಗಸ್ತ್ಯ ಮಹರ್ಷಿಗಳ ಪತ್ನಿ ಲೋಪಾಮುದ್ರಾ, ಅತ್ರಿಮಹರ್ಷಿಗಳ ಪತ್ನಿ ಅನಸೂಯಾ ಇತ್ಯಾದಿ. ವೇದೋಕ್ತವಾದ ಯಜ್ಞಗಳನ್ನು ಮಾಡುವ ಅಧಿಕಾರವಿರುವುದು ಪತ್ನೀಸಹಿತನಾದ ಗೃಹಸ್ಥನಿಗೆ ಮಾತ್ರ. ಯಜ್ಞಗಳಿಗೆ ಪ್ರಾಧಾನ್ಯವಿದ್ದ ಕಾಲದಲ್ಲಿ ಎಲ್ಲರೂ ಗೃಹಸ್ಥರೇ ಆಗಿರುತ್ತಿದ್ದುದು ಸಹಜ.

ಗೃಹಸ್ಥಧರ್ಮವು ಆಧ್ಯಾತ್ಮಿಕ ಸಾಧನೆಗೆ ಅಡ್ಡಿಯಾಗುವುದಲ್ಲ ಎಂಬುದಕ್ಕೆ ಇತಿಹಾಸ ಪುರಾಣಗಳಲ್ಲಿ ಸಾಕಷ್ಟು ಸಾಕ್ಷಿಗಳಿವೆ. ಜನಕ ಮಹಾರಾಜನು ಗೃಹಸ್ಥನಾಗಿದ್ದರೂ ಆತ್ಮಜ್ಞಾನದಲ್ಲೂ ಬ್ರಹ್ಮವಿದ್ಯೆಯಲ್ಲೂ ಅದ್ವಿತೀಯನಾಗಿದ್ದನೆಂಬುವುದು ಅನೇಕ ಗ್ರಂಥಗಳಲ್ಲಿ ಉಕ್ತವಾಗಿದೆ. ಭಗವದ್ಗೀತೆಯಲ್ಲೂ –

**'ಕರ್ಮಣೈವ ಹಿ ಸಂಸಿದ್ಧಿಮಾಸ್ಥಿತಾ ಜನಕಾದಯಃ'**

— ಈ ವಿಷಯವು ಸ್ಪಷ್ಟವಾಗಿದೆ.

### ಸಮಾಜಕ್ಕೆ ಆಶ್ರಯನಾದವನು ಗೃಹಸ್ಥ

ಬ್ರಹ್ಮಚಾರಿಯು ಅಧ್ಯಯನವನ್ನು ಮಾಡಿ ದಣಿದು ಹೊಟ್ಟೆ ತುಂಬಿಸಿಕೊಳ್ಳಲು ಗೃಹಸ್ಥರ ಮನೆಗಳ ಮುಂದೆ ನಿಂತು 'ಭವತಿ ಭಿಕ್ಷಾಂ ದೇಹಿ' ಎಂದು ಬೇಡಿ ಅವರು ನೀಡಿದ ಅನ್ನದಿಂದ ಬದುಕುತ್ತಾನೆ. ಸಂನ್ಯಾಸಿಗಳೂ ಹಾಗೆ ಭಿಕ್ಷಾನ್ನದಿಂದ, ಗೃಹಸ್ಥರು ನೀಡಿದ ವಸ್ತ್ರಾದಿಗಳಿಂದ ಜೀವಿಸಬೇಕು ಎನ್ನುತ್ತದೆ ಶಾಸ್ತ್ರ. ವಾನಪ್ರಸ್ಥರೂ ಕಾಡಿನಲ್ಲಿ ಗೆಡ್ಡೆಗೆಣಸು ಸಿಕ್ಕದಿದ್ದಾಗ ಗೃಹಸ್ಥರ ಆಶ್ರಯದಲ್ಲೇ ಬದುಕಬೇಕಾಗುತ್ತದೆ. ಹೀಗೆ ಉಳಿದ ಎಲ್ಲ ಆಶ್ರಮಗಳನ್ನು ಅವಲಂಬಿಸಿದವರನ್ನು ಕಾಪಾಡುವುದು ಗೃಹಸ್ಥನೇ. ಇದನ್ನು ರಘುವಂಶದ ಒಂದು ಶ್ಲೋಕದಲ್ಲಿ ಕಾಳಿದಾಸನು ಸ್ಪಷ್ಟಪಡಿಸಿದ್ದಾನೆ. ಕೌತ್ಸನೆಂಬ ವಿದ್ಯಾರ್ಥಿಯು ತನ್ನ ವಿದ್ಯಾಭ್ಯಾಸವನ್ನು ಮುಗಿಸಿ ಗುರುದಕ್ಷಿಣೆಯನ್ನು ಕೊಡುವುದಕ್ಕಾಗಿ ರಘುಮಹಾರಾಜನ ನೆರವನ್ನು ಪಡೆಯಲು ಬಂದ ಸಂದರ್ಭದಲ್ಲಿ ರಘುಮಹಾರಾಜನು ಅವನ ಕುಶಲವನ್ನು ವಿಚಾರಿಸಿ ಅನಂತರ ಕೇಳುತ್ತಾನೆ :

**ಅಪಿ ಪ್ರಸನ್ನೇನ ಮಹರ್ಷಿಣಾ ತ್ವಂ**
**ಸಮ್ಯಗ್ವಿನೀಯಾನುಮತೋ ಗೃಹಾಯ ।**
**ಕಾಲೋ ಹ್ಯಯಂ ಸಂಕ್ರಮಿತುಂ ದ್ವಿತೀಯಂ**
**ಸರ್ವೋಪಕಾರಕ್ಷಮಮಾಶ್ರಮಂ ತೇ ॥**

(ಪ್ರಸನ್ನನಾದ ಮಹರ್ಷಿ ವರತಂತುವು ನಿನಗೆ ಪೂರ್ಣವಾದ ವಿದ್ಯೆಯನ್ನು ನೀಡಿ ನೀನು ಗೃಹಸ್ಥನಾಗಲು ಅನುಮತಿಯನ್ನು ಕೊಟ್ಟಿರುವನೆ? ಎಲ್ಲ ಆಶ್ರಮಗಳಿಗೂ ಉಪಕಾರಕವಾಗಿರುವ ಗೃಹಸ್ಥಾಶ್ರಮವನ್ನು ಪ್ರವೇಶಿಸಲು ಇದು ನಿನಗೆ ಸರಿಯಾದ

ಕಾಲ.) ಗೃಹಸ್ಥಾಶ್ರಮಿಗಳು ಇಲ್ಲದಿದ್ದರೆ ಉಳಿದ ಬ್ರಹ್ಮಚರ್ಯಾದ್ಯಾಶ್ರಮಗಳವರು ಬದುಕುವುದು ದುಷ್ಕರ ಎಂದು ಇದರ ತಾತ್ಪರ್ಯ.

### ಭಾಗವತ ಪುರಾಣದಲ್ಲಿ ಗೃಹಸ್ಥಧರ್ಮ

ಭಾಗವತ ಪುರಾಣದ ಏಳನೆಯ ಸ್ಕಂದದ ಹನ್ನೊಂದನೆಯ ಅಧ್ಯಾಯದಲ್ಲಿ ಮನುಷ್ಯ ಸಾಮಾನ್ಯ ಧರ್ಮಗಳನ್ನೂ, ಹನ್ನೆರಡನೆಯ ಅಧ್ಯಾಯದಲ್ಲಿ ಬ್ರಹ್ಮಚರ್ಯಾಶ್ರಮದ ಧರ್ಮಗಳನ್ನೂ ವಾನಪ್ರಸ್ಥಾಶ್ರಮಧರ್ಮಗಳನ್ನೂ, ಹದಿಮೂರನೆಯ ಅಧ್ಯಾಯದಲ್ಲಿ ಸಂನ್ಯಾಸಾಶ್ರಮ ಧರ್ಮಗಳನ್ನೂ, ಹದಿನಾಲ್ಕನೆಯ ಅಧ್ಯಾಯದಲ್ಲಿ ಗೃಹಸ್ಥಾಶ್ರಮ ಧರ್ಮಗಳನ್ನೂ ಹೇಳಿದ್ದಾರೆ. ಯುಧಿಷ್ಠಿರನಿಗೆ ನಾರದಮಹರ್ಷಿ ಈ ಧರ್ಮಗಳನ್ನು ಉಪದೇಶಿಸಿದನೆಂದು ಅಲ್ಲಿ ಹೇಳಲಾಗಿದೆ. ಧರ್ಮ-ಅರ್ಥ- ಕಾಮಗಳೆಂಬ ತ್ರಿವರ್ಗವನ್ನು ಗೃಹಸ್ಥನು ನ್ಯಾಯಾನುಸಾರವಾಗಿ ಅನುಭವಿಸಬೇಕು ಎಂದು ನಾರದನ ಉಪದೇಶ.

ತ್ರಿವರ್ಗಂ ನಾತಿಕೃಚ್ಛ್ರೇಣ ಭಜೇತ ಗೃಹಮೇಧ್ಯಪಿ ।
ಯಥಾದೇಶಂ ಯಥಾಕಾಲಂ ಯಾವದ್‌ದೈವೋಪಪಾದಿತಮ್ ॥

ದೇಶಕ್ಕೂ ಕಾಲಕ್ಕೂ ಅನುಗುಣವಾಗಿ ದೈವವು ಒದಗಿಸಿದಂತೆ ಧರ್ಮಾರ್ಥಕಾಮಗಳನ್ನು ಸೇವಿಸಬೇಕೆಂಬುದು ಇದರ ತಾತ್ಪರ್ಯ.

'**ಧರ್ಮಾವಿರುದ್ಧೋ ಭೂತೇಷು ಕಾಮೋಽಸ್ಮಿ ಭರತರ್ಷಭ**' ಎಂಬ ಗೀತಾವಾಕ್ಯವನ್ನು ಇಲ್ಲಿ ಸ್ಮರಿಸಬೇಕು.

ಗೃಹಸ್ಥನು ಪ್ರತಿದಿನವೂ ಐದು ಯಜ್ಞಗಳನ್ನು ಮಾಡಬೇಕೆಂದು ಗೃಹ್ಯಸೂತ್ರಗಳಲ್ಲೂ ಪುರಾಣಗಳಲ್ಲೂ ಹೇಳಲಾಗಿದೆ. ದೇವಯಜ್ಞ, ಪಿತೃಯಜ್ಞ, ಋಷಿಯಜ್ಞ, ಮನುಷ್ಯಯಜ್ಞ, ಭೂತಯಜ್ಞ ಎಂಬುವು ಐದು ಯಜ್ಞಗಳು. ಇವುಗಳನ್ನು ಪಂಚ ಮಹಾಯಜ್ಞಗಳೆಂದೂ ಕರೆಯುತ್ತಾರೆ. **ದೇವಯಜ್ಞ** ಎಂದರೆ ಇಂದ್ರಾದಿದೇವತೆಗಳಿಗೆ ಅವರು ಸುರಿಸುವ ಮಳೆ ಮುಂತಾದ ಅನುಗ್ರಹಗಳಿಗಾಗಿ ಕೃತಜ್ಞತೆಯನ್ನು ವ್ಯಕ್ತಪಡಿಸಲು ಅಗ್ನಿಯಲ್ಲಿ ಹವಿಸ್ಸನ್ನು ಅರ್ಪಿಸುವುದು. **ಋಷಿಯಜ್ಞ**ವೆಂದರೆ ವೇದಮಂತ್ರಗಳ ಮತ್ತು ಆ ಋಷಿಗಳು ರಚಿಸಿದ ಗ್ರಂಥಗಳ ಅಧ್ಯಯನ. **ಪಿತೃಯಜ್ಞ**ವೆಂದರೆ ಗತಿಸಿದ ಪಿತೃಗಳಿಗೆ ಪಿಂಡಾರ್ಪಣೆ, ತಿಲಾಂಜಲಿ, ಜಲಾಂಜಲಿ ಇತ್ಯಾದಿಗಳನ್ನು ಕೊಡುವುದು. **ಮನುಷ್ಯಯಜ್ಞ** ಎಂದರೆ ಅತಿಥಿಗಳಿಗೆ ಅನ್ನಪಾನಾದಿಗಳನ್ನು ನೀಡಿ ಸತ್ಕರಿಸುವುದು. ಭೂತಯಜ್ಞವೆಂದರೆ ಪ್ರಾಣಿಗಳಿಗೆ, ಪಕ್ಷಿಗಳಿಗೆ ಯಥಾಶಕ್ತಿ ಅನ್ನವನ್ನು ಕೊಡುವುದು. ಈ ಐದು ಯಜ್ಞಗಳನ್ನು ಗೃಹಸ್ಥನು ತಪ್ಪದೇ ಮಾಡಬೇಕೆಂದು ಶಾಸ್ತ್ರಗಳು ವಿಧಿಸಿವೆ. ಸಾಮಾಜಿಕ ಜವಾಬ್ದಾರಿಯನ್ನು ಹೊರುವವರಲ್ಲಿ ಗೃಹಸ್ಥನೇ ಅಗ್ರಣಿ ಎಂದು ಇದರಿಂದ ವ್ಯಕ್ತವಾಗುತ್ತದೆ.

ಚಾಣಕ್ಯನು ಗೃಹಸ್ಥನಾಗಿರದಿದ್ದರೂ ಗೃಹಸ್ಥಾಶ್ರಮವನ್ನು ಹೀಗೆ ಹೊಗಳಿದ್ದಾನೆ :

ಸಾನಂದಂ ಸದನಂ ಪುತ್ರಾಶ್ಚ ಸುಧಿಯಃ ಕಾಂತಾ ನ ದುರ್ಭಾಷಿಣೀ
ಸನ್ಮಿತ್ರಂ ಸುಧನಂ ಸ್ವಯೋಷಿತಿ ರತಿಶ್ಚಾಜ್ಞಾಪರಾಃ ಸೇವಕಾಃ ।
ಆತಿಥ್ಯಂ ಶಿವಪೂಜನಂ ಪ್ರತಿದಿನಂ ಮೃಷ್ಟಾನ್ನಪಾನಂ ಗೃಹೇ
ಸಾಧೋಃ ಸಂಗಮುಪಾಸತೇ ಹಿ ಸತತಂ ಧನ್ಯೋ ಗೃಹಸ್ಥಾಶ್ರಮಃ॥

'ಮನೆಯಲ್ಲಿ ಆನಂದ, ಮಕ್ಕಳು ಬುದ್ಧಿಶಾಲಿಗಳು, ಎಂದೂ ಕರ್ಕಶ ನುಡಿಗಳನ್ನಾಡದ ಪತ್ನಿ, ಉತ್ತಮ ಸ್ನೇಹಿತರು, ನ್ಯಾಯ ಮಾರ್ಗದಲ್ಲಿ ಸಂಪಾದಿಸಿದ ಹಣ, ಹೆಂಡತಿಯಲ್ಲಿ ಪ್ರೀತಿ, ಆಜ್ಞೆಯನ್ನು ಪಾಲಿಸುವ ಸೇವಕರು, ನಿತ್ಯವೂ ಅತಿಥಿಸತ್ಕಾರ, ಶಿವನ ಪೂಜೆ, ಮನೆಯಲ್ಲಿ ಮೃಷ್ಟಾನ್ನ, ಸಾಧುಸಜ್ಜನರ ಸಹವಾಸ, ಇವೆಲ್ಲವೂ ಸಾಧ್ಯವಾಗುವಂತೆ ಮಾಡುವ ಗೃಹಸ್ಥಾಶ್ರಮವು ಧನ್ಯ.'

ಗೃಹಸ್ಥಧರ್ಮವನ್ನು ಆಶ್ರಯಿಸಿದವನೂ ಮೋಕ್ಷವನ್ನು ಪಡೆಯಬಹುದೆಂದು ಒಬ್ಬ ಕವಿ ಹೇಳಿದ್ದಾನೆ :

ನ್ಯಾಯಾರ್ಜಿತ ಧನಸ್ತತ್ತ್ವಜ್ಞಾನನಿಷ್ಠೋ ಅತಿಥಿಪ್ರಿಯಃ ।
ಶಾಸ್ತ್ರವಿತ್ ಸತ್ಯವಾದೀ ಚ ಗೃಹಸ್ಥೋಽಪಿ ವಿಮುಚ್ಯತೇ ॥

ನ್ಯಾಯಮಾರ್ಗದಲ್ಲಿ ಹಣವನ್ನು ಗಳಿಸಿ, ತತ್ತ್ವಜ್ಞಾನನಿಷ್ಠನಾಗಿ, ಅತಿಥಿಗಳ ಸತ್ಕಾರದಲ್ಲಿ ತೊಡಗಿ, ಶಾಸ್ತ್ರಾರ್ಥವನ್ನು ತಿಳಿದುಕೊಂಡು, ಸದಾ ಸತ್ಯವನ್ನೇ ನುಡಿಯುವ ಗೃಹಸ್ಥನೂ ಮೋಕ್ಷವನ್ನು ಪಡೆಯಲು ಅರ್ಹನು.

ಐಶ್ವರ್ಯಸ್ಯ ವಿಭೂಷಣಂ ಸುಜನತಾ
ಶೌರ್ಯಸ್ಯ ವಾಕ್ಸಂಯಮಃ
ಜ್ಞಾನಸ್ಯೋಪಶಮಃ ಶ್ರುತಸ್ಯ ವಿನಯೋ
ವಿತ್ತಸ್ಯ ಪಾತ್ರೇ ವ್ಯಯಃ ।
ಅಕ್ರೋಧಸ್ತಪಸಃ ಕ್ಷಮಾ ಪ್ರಭವಿತು-
ರ್ಧರ್ಮಸ್ಯ ನಿರ್ವ್ಯಾಜತಾ
ಸರ್ವೇಷಾಮಪಿ ಸರ್ವಕಾರಣಮಿದಂ
ಶೀಲಂ ಪರಂ ಭೂಷಣಮ್ ॥

'ಐಶ್ವರ್ಯಕ್ಕೆ ಸೌಜನ್ಯವೂ, ಪರಾಕ್ರಮಕ್ಕೆ ಮಿತ ಭಾಷಣವೂ, ಜ್ಞಾನಕ್ಕೆ ಉಪಶಮನವೂ, ವಿದ್ಯೆಗೆ ವಿನಯವೂ, ಹಣಕ್ಕೆ ಸತ್ಪಾತ್ರವ್ಯಯವೂ, ತಪಸ್ಸಿಗೆ ಕೋಪವಿಲ್ಲದಿರುವಿಕೆಯೂ, ಪ್ರಭುವಿಗೆ ಕ್ಷಮೆಯೂ, ಧರ್ಮಕ್ಕೆ ಫಲಾಪೇಕ್ಷೆಯಿಲ್ಲದಿರುವುದೂ ಭೂಷಣಗಳು. ಆದರೆ ಎಲ್ಲಕ್ಕೂ ಮುಖ್ಯ ಕಾರಣವಾದ ಶೀಲವೇ ಶ್ರೇಷ್ಠ ಭೂಷಣ.'

*— ಭರ್ತೃಹರಿಯ ನೀತಿಶತಕ*